

ಆಗಸ್ಟ್ ಹಿರ್ಟ್‌ನ ಯೋಜನೆಗೆ ಆಯ್ಕೆಯಾದ 86 ಯೆಹೂದಿಗಳಲ್ಲಿ ಒಬ್ಬಳಾದ ಎಲಿಜಬತ್ ಕ್ಲೈನ್

ಆ 87 ಜನರಲ್ಲಿ ಒಬ್ಬ ಹೇಗೋ ಅಲ್ಲಿಯೇ ಸತ್ತು, 86 ಮಂದಿ ಮಾತ್ರ ಉಳಿಯುತ್ತಾರೆ. ಆ 86 ಮಂದಿಯ ಗುಂಪು ಒಂದು ದಿನ ಆಸ್ಕ್‌ವಿಜ್‌ನಿಂದ ರಾತೋರಾತ್ರಿ ಕಾಣೆಯಾಗುತ್ತದೆ. ಕಾರಣ, ಅವರನ್ನು ಅಂದು ರಾತ್ರಿಯೆ ಒಂದು ಸಣ್ಣ ಅನಿಲಕೋಣೆಗೆ ತಳ್ಳಿ ಮಾರಕ ಅನಿಲವನ್ನು ಒಳಗೆ ತುಂಬಿಸಿ ಎಲ್ಲರನ್ನೂ ಸಾಯಿಸಿ ರಾತೋರಾತ್ರಿ, ಅವರಿಗೆಂದೆ ನಿಗದಿಪಡಿಸಿದ್ದ ರೈಲುಗಾಡಿಯ ಕೋಚ್‌ನಲ್ಲಿ ಸಾಗಿಸುತ್ತಾನೆ ಸ್ಟ್ರಾಸ್‌ಬರ್ಗ್. ಅಲ್ಲಿ ಆಗಸ್ಟ್ ಹಿರ್ಟ್ ಎಲ್ಲ ಕಳೇಬರಗಳನ್ನು ಸ್ವೀಕರಿಸಿ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ಅನುವಾಗುತ್ತಾನೆ. ಅದಕ್ಕಾಗಿ ಮೊದಲು ಅವರ ಮುಖ, ಶಿರ, ದೇಹದ ಎಲ್ಲ ಭಾಗಗಳ ಹೊರ ಅಳತೆಗಳನ್ನು ಮಾಡಿ, ನಂತರ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಅಚ್ಚುಗಳನ್ನು ತೆಗೆಯುವ ಕೆಲಸದಲ್ಲಿ ನಿರತನಾಗುತ್ತಾನೆ. ಎಲ್ಲವೂ ರಹಸ್ಯವಾಗಿಯೆ ನಡೆಯಬೇಕಾಗಿದ್ದುದರಿಂದ ಈ ಕಾರ್ಯವನ್ನು ಖುದ್ದಾಗಿ ತಾನೆ ನಿರ್ವಹಿಸುತ್ತಿರುತ್ತಾನೆ. ಕೆಲವರ ಮಾಂಸ ಸುಲಿದು, ಅಸ್ಥಿಪಂಜರಗಳಾಗಿಯೂ, ಕೆಲವರ ಮೆದುಳನ್ನು ಬಿಡಿಸಿಯೂ, ಇನ್ನುಳಿದವರನ್ನೂ ಯಥಾಸ್ಥಿತಿಯಲ್ಲಿಯೂ ಸಂಗ್ರಹಿಸುವ ಯೋಚನೆಯಲ್ಲಿರುತ್ತಾನೆ. ಕೆಲವರ ಅಂಗಾಂಗಳನ್ನೂ, ಅಂಗಾಂಶಗಳನ್ನೂ ಬಿಡಿಸಿರುತ್ತಾನೆ ಕೂಡ. ಆದರೆ ಇಡೀ ಯೋಜನೆ ಕಾರ್ಯಗತಗೊಳ್ಳುವಷ್ಟರಲ್ಲಿ ಮಿತ್ರರಾಷ್ಟ್ರಗಳ ಸೈನ್ಯವು ಜರ್ಮನಿಯ ಸೈನಿಕರನ್ನು ಸೋಲಿಸಿ ಸ್ಟ್ರಾಸ್‌ಬರ್ಗ್‌ನತ್ತ ಧಾವಿಸಿ ಬರುತ್ತಿರುವ ಸುದ್ದಿ ತಲುಪುತ್ತದೆ. ಅದರ ಬೆನ್ನಲ್ಲಿಯೇ ಹಿಮ್ಲರ್‌ನ ಕಡೆಯಿಂದ 'ಶತ್ರು ಸೈನ್ಯಕ್ಕೆ ಕುರುಹುಗಳು ಸಿಗದ ಹಾಗೆ ಕೆಲಸವನ್ನು ತುರ್ತಾಗಿ ಮಾಡಿ ಮುಗಿಸಬೇಕು ಹಾಗೂ ಎಲ್ಲ ಗುರುತುಗಳನ್ನೂ ನಾಶ ಪಡಿಸಬೇಕು' ಎಂದು ತಂತಿ ಬರುತ್ತದೆ. ಆದರೆ ಮಿತ್ರರಾಷ್ಟ್ರಗಳ ಸೈನ್ಯ ಬರುವುದರೊಳಗೆ 86 ದೇಹಗಳನ್ನು ಕ್ಷಿಪ್ರವಾಗಿ ಪರಿಷ್ಕರಿಸಲು ಸಾಧ್ಯವಾಗದೆಂದು ಅರಿತ ಆಗಸ್ಟ್ ಹಿರ್ಟ್, ಎಲ್ಲವನ್ನೂ ತ್ಯಜಿಸಿ ಸ್ಟ್ರಾಸ್‌ಬರ್ಗ್ ಬಿಟ್ಟು ಓಡಿಹೋಗುತ್ತಾನೆ.

ಪ್ರಯೋಗ ಶಾಲೆಯಲ್ಲಿ ಮಿತ್ರ ರಾಷ್ಟ್ರಗಳ ಕೈಗೆ ಸಿಕ್ಕಿದ ಶವಗಳು ನಾಜಿಗಳ ಆ ವಿಕೃತ ಯೋಜನೆಯನ್ನೂ, ಅದರ ರೂಪರೇಷೆಗಳನ್ನೂ ಪ್ರಪಂಚಕ್ಕೆ ಸಾರಿ ಹೇಳುವ ರುದ್ರ ಸೂಚಕಗಳಾಗುತ್ತವೆ; ತಮ್ಮಲ್ಲಿ ಜೀವ ತುಂಬಿದ್ದ ಆತ್ಮಗಳಿಗೆ ಒದಗಿದ ದುರಂತಕತೆಗೆ ಮೌನ ಸಾಕ್ಷಿಗಳಾಗುತ್ತವೆ. ಈ ಮಧ್ಯ ಆ ದೇಹಗಳಲ್ಲಿ 'ಯೆಹೂದಿ'ಗಳಾಗಿ ಬದುಕಿದ್ದ ನತದೃಷ್ಟ ಮಾನವರ ಚರಿತ್ರೆಯನ್ನು ಹುಡುಕಲೆಂದು ಕೆಲವು ಸತ್ಯ ಶೋಧಕರು ಅವಕ್ಕೆ ಲಗತ್ತಿಸಿದ್ದ ಸಂಖ್ಯೆಗಳನ್ನು ತಮ್ಮೊಡನೆ ಒಯ್ದು ಹಲವಾರು ಹಾದಿಗಳಲ್ಲಿ ಹುಡುಕಾಡುತ್ತಾರೆ. ಕೊನೆಗೆ ಹೇಗೋ ಆ ಯೆಹೂದಿಗಳಿಗೆ ಟೈಫಸ್ ಲಸಿಕೆ ಹಾಕುವಾಗ ವಿವರಗಳನ್ನು ಬರೆದಿದ್ದ ರಿಜಿಸ್ಟರ್ ದೊರಕಿ ಅಲ್ಲಿದ್ದ ಸಂಖ್ಯೆಗಳೊಡನೆ ಹೋಲಿಸಿ ಎಲ್ಲರನ್ನೂ ಗುರುತಿಸಿ, ಅವರ ಹೆಸರುಗಳನ್ನೂ ಮೂಲ ವಿಳಾಸಗಳನ್ನೂ ಹುಡುಕಿ ತೆಗೆಯುತ್ತಾರೆ. 1951ರಲ್ಲಿ ಎಲ್ಲ ಶವಗಳಿಗೂ ಸ್ಟ್ರಾಸ್‌ಬರ್ಗ್ ಬಳಿಯ ಯೆಹೂದಿಗಳ ಮಸಣವಾದ **Cronenbourg Jewish Cemetery**ನಲ್ಲಿ ಸೂಕ್ತವಾದ ಅಂತ್ಯಕ್ರಿಯೆ ನೀಡಲಾಗುತ್ತದೆ. ಈ ಎಲ್ಲ ಆಧಾರಗಳನ್ನಾಧರಿಸಿ ಈ ಯೋಜನೆಗೆ ಕಾರಣಕರ್ತರಾದವರನ್ನೆಲ್ಲ ಗುರುತಿಸಿ, ತನಿಖೆ ನಡೆಸಲಾಗುತ್ತದೆ. ಯೋಜನೆಯ